

ಎದುರಿಸುವುದು' ಎನ್ನುತ್ತಾ ಚಡಪಡಿಸುತ್ತಾ ಅಲ್ಲಿಯೇ ಹೊಣಕಾಡಿದ.

ಹಗ್ಗ ಜಗ್ಗಿ ಜಗ್ಗಿ ರಟ್ಟೆ ನೋವು ಬಂದು ಹೋಗಿತ್ತು. ಹೊಂಡದಿಂದಾದ ಅನಾಹುತಗಳ ಬಗ್ಗೆ ಚಿಂತಿಸಿ ತಲೆ ಸಿಡಿಯತೊಡಗಿತ್ತು. ಹೊನ್ನಮ್ಮ ಬರುವುದರೊಳಗೆ ಒಂದು ಬೀಡಿ ಸೇದಿಕೊಂಡರೆ ಹೇಗೆ ಎನಿಸಿತು. ಆದರೆ, ಎರಡು ಕೈಗಳಲ್ಲೂ ಹಗ್ಗವನ್ನು ಜಗ್ಗಿ ಹಿಡಿದಿರುವುದರಿಂದ, ಜೇಬಿನಿಂದ ಬೀಡಿ ತೆಗೆದು ಹತ್ತಿಸಿ ಹೇಗೆ ಸೇದುವುದು...

ಒಂದು ಉಪಾಯ ಹೊಳೆಯಿತು. ಕೈಯಲ್ಲಿ ಹಿಡಿದಿದ್ದ ಹಗ್ಗವನ್ನು ಸೊಂಟಕ್ಕೆ ಕಟ್ಟಿಕೊಂಡು ಗಟ್ಟಿಯಾಗಿ ಅಂಡೂರಿ ಕುಳಿತು ಬೀಡಿ ತೆಗೆದು ಹತ್ತಿಸಿದ.

ಹೊಂಡದ ಕೆಸರೊಳಗೆ ನಾಲ್ಕು ಕಾಲುಗಳನ್ನು ಇಳಿ ಬಿಟ್ಟುಕೊಂಡು ಒಂದು ಗಂಟೆಯಿಂದ ನೇತಾಡುವ ಸ್ಥಿತಿಯಲ್ಲಿದ್ದ ಹಸು ಹಗ್ಗ ಕೊಂಚ ಸಡಿಲವಾದಂತಾದಾಗ ಕಾಲು ತಲೆಯನ್ನೆಲ್ಲ ಒಮ್ಮೆಗೆ ಜೋರಾಗಿ ಅಲುಗಾಡಿಸಿತು.

ಹೆಡ್ಡಪ್ಪ ಸೊಂಟಕ್ಕೆ ಕಟ್ಟಿಕೊಂಡಿದ್ದ ಹಗ್ಗ ಒಮ್ಮೆಲೇ ಜಗ್ಗಿದಂತಾಗಿ ಅವನೂ ಜಾರುತ್ತಾ ಹೋಗಿ ಚಪಕ್ಕನೆ ಹೊಂಡದೊಳಕ್ಕೆ ಕುಕ್ಕರಿಸಿಕೊಂಡ.

* * *

ಉದ್ದ ಹಗ್ಗಗಳನ್ನು ಒಂದಕ್ಕೊಂದು ಗಂಟು ಹಾಕಿ ಅವುಗಳನ್ನು ಸಿಂಬಿಯಂತೆ ದುಂಡಗೆ ಸುತ್ತಿ ಹಿಡಿದು ಓಡೋಡಿ ಬಂದ ಹೊನ್ನಮ್ಮನಿಗೆ, ಹದಿನೈದು ದಿನಗಳ ಹಿಂದೆ ನಳನಳಿಸುತ್ತಿದ್ದ ಪೈರು ಒಣಗಿ ನೆಲಕಚ್ಚಿರುವುದನ್ನು ದಿಟ್ಟಿಸುವ ಮನಸಾಗಲಿಲ್ಲ. ನೇರ ಹೋಗಿ ಹೊಂಡದಲ್ಲಿ ಇಣುಕಿದಳು.

ಹೊಂಡದ ಎರಡನೇ ಹಂತದಲ್ಲಿ ಗೋಡೆಗೊರಗಿ ಹಗ್ಗ ಹಿಡಿದೆಳೆದು ನಿಲ್ಲಿಸಿ ಹೋಗಿದ್ದ ಗಂಡ ಅಲ್ಲಿ ಕಾಣಲಿಲ್ಲ. ಎದೆ ದಸಕ್ಕಂದಿತು. 'ಅಯ್ಯೋ ದೇವ್ರೆ ಏನಾಯ್ತಪ್ಪ... ಇವ್ನ ನಂಬಂಗಿಲ್ಲ...ಎಲ್ಲಾದ್ರೂ ಹಂದಿ ತುಂಡು ಕ್ವಾಟ್ರ ಆಸೆಗೆ ಹಗ್ಗ ಕೈಬಿಟ್ಟು ಅವಸರದಮ್ಮನಿಗೆ ಹೋಗವ್ರ ಜೊತೆ ಹೋಗಿ ಬಿಟ್ನ... ಹಸ ಏನಾಗಿ ಹೋಯ್ತೋ' ಎಂದುಕೊಳ್ಳುತ್ತಾ ಹೊಂಡದ ತಳಕ್ಕೆ ಕಣ್ಣು ಹಾಯಿಸಿದಳು.

ಹೊಂಡದ ಕೆಸರಿನ ಮೇಲೆ ತಲೆ ಚಾಚಿಕೊಂಡು ಹಸುವಿನ ಜತೆಗೆ ಹೆಡ್ಡಪ್ಪನೂ ನಿಂತಿದ್ದಾನೆ.

ಕೆರೆಯ ದಡದಂಚಿನ ನೀರಿನಲ್ಲಿ, ಮೇಲೆ ತಲೆ ಹಾಕಿ ನಿಂತ ಕಪ್ಪೆಗಳಂತೆ ಹಸು, ಗಂಡ ಇಬ್ಬರೂ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದಾರೆ. 'ಅಯ್ಯೋ ನಿನ್ನ ಮಕ ಮಣ್ತಿನ್ನಾ... ಹಿಂಗೂ ಬೇರೆ ಮಾಡ್ಕಂಡಿದೀಯಾ... ಇನ್ನೊಂದು ಗಳಿಗೆ ನಾನ್ ಬರದೆ ಹೋಗಿದ್ರೆ, ಕೆಸರಲ್ಲಿ ಇಬ್ರು ಮುಳುಗಿ ಹೋಗಿ ಬುಡ್ತಿದ್ರಲ್ಲ... ತಗಾ ಈ ಹಗ್ಗದ ತುದಿಯ ನಿಮ್ಮಿಬ್ಬರ ಮಧ್ಯದ ಹಗ್ಗಕ್ಕೆ ಕಟ್ಟು... ನಾನು ಮೇಲಕ್ಕೆ ಹೋಗಿ ಎಳ್ಕಂಡು ಬದಿನ ಹೊಂಗೆ ಗಿಡದ ಬಡ್ಡೆಗೆ ಕಟ್ಟಿ ನೀವಿಬ್ರೂ ಇನ್ನೂ ಕೆಳಕ್ಕೆ ಜರುಗ್ದಂಗೆ ಎಳ್ದು ಹಿಡ್ಕಂಡಿರ್ತೀನಿ... ದೇವರಿಗೆ ಹೋದವ್ರು, ರಾಕೇಶ ಎಲ್ಲ ಬಂದ ಮೇಲೆ ಏನಾದ್ರೂ ಮಾಡಕಾಗುತ್ತೆ' ಎನ್ನತ್ತಾ ಹೊಂಡದ ಮೇಲೆ ಏರಿದಳು. ಹಗ್ಗದ ಇನ್ನೊಂದು ತುದಿಯನ್ನು ಹೊಂಗೆ ಗಿಡದ ಕಾಂಡಕ್ಕೆ ಒಂದು ಸುತ್ತು ಸುತ್ತಿ ಬಿಗಿದು ಕೆಳಗಿನ ಭಾರಕ್ಕೆ ಇನ್ನೂ ಜಗ್ಗಿ ಹೆಡ್ಡಪ್ಪ ಹಾಗೂ ಹಸು ಮುಳುಗದಂತೆ ಎಳೆದು ಹಿಡಿದುಕೊಂಡು ಆ ಉರಿ ಬಿಸಿಲಿನಲ್ಲಿ ಅವಸರದಮ್ಮನ ದಿಕ್ಕಿಗೆ ಮುಖ ಮಾಡಿ ಸಹಾಯಕ್ಕಾಗಿ ಕಾಯತೊಡಗಿದಳು.

* * *

ಒಂದು ಗಂಟೆ ಕಳೆಯಿತು. ಎರಡು ಗಂಟೆ ಕಳೆಯಿತು. ಮೂರು ಗಂಟೆ ಕಳೆಯಿತು.ದಾರಿ ನೋಡಿ ನೋಡಿ ಹೊನ್ನಮ್ಮನ ಕಣ್ಣು ನೋಯತೊಡಗಿದವು.ಹಗ್ಗ ಜಗ್ಗಿ ಜಗ್ಗಿ ರಟ್ಟೆ ಸೋತು ಹೋಗಿದ್ದವು. ಅತ್ತ ಊರವರ ಸುಳಿವೂ ಇಲ್ಲ. ಇತ್ತ ನಗರದ ಕಡೆಯಿಂದ ರಾಕೇಶನ ಸುಳಿವೂ ಇಲ್ಲ. ಅವನೊಬ್ಬನಾದರೂ ಬಂದಿದ್ದರೆ. ನಗರದಲ್ಲಿ ಸಂತೆ ಬೇರೆ... ಮಂಡಿ ಬಿಟ್ಟು ಬರಲು ಸಾವುಕಾರರು ಅವಕಾಶ ಮಾಡಿಕೊಟ್ಟಿಲ್ಲವೋ ಏನೋ. ಅವಸರದಮ್ಮನ ಕಡೆಯಿಂದ ಸದ್ದಾಯಿತು. ಹೊನ್ನಮ್ಮ ಆಸೆಯಿಂದ ನೋಡಿದಳು. ಭರದಿಂದ ಬಂದ ಟ್ರಾಕ್ಟರ್ ಅಲ್ಲಿ ನಿಲ್ಲದೆ ಊರ ಕಡೆ ಧಾವಿಸಿತು.

ಅದರ ಹಿಂದೆಯೇ ಬಂದ ಕರಿಯಣ್ಣನ ಮೊಪೆಡ್ ನೇರ ಹೊಂಡದ ಬಳಿಯೇ ನಿಂತುಕೊಂಡಿತು. ಈ ಒಬ್ಬನಾದರೂ ಬಂದನಲ್ಲ? ಹೊನ್ನಮ್ಮನಿಗೆ ಧೈರ್ಯವಾಯಿತು. ಕಂಠಪೂರ್ತಿ ಕುಡಿದಿದ್ದ ಅವನು ಏನೂ ಮಾತಾಡದೆ ಹೊಂಡದೊಳಕ್ಕೆ ಇಳಿದ. ಕೆಸರೊಳಕ್ಕೆ ದೇಹ ಮುಳುಗಿಸಿ ಹಗ್ಗಕ್ಕೆ ನೇತುಬಿದ್ದಿದ್ದ ಹಸು ಹಾಗೂ ಹೆಡ್ಡಪ್ಪ ನಿಶ್ಚಲವಾಗಿದ್ದರು. ಅವರ ಪಿಳಿ ಪಿಳಿ ಕಣ್ಣುಗಳಿಂದ ಆ ಎರಡು ಜೀವಗಳು ಇನ್ನೂ ಜೀವಂತವಾಗಿರುವುದು ತಿಳಿಯುತ್ತಿತ್ತು. 'ಇಂತಾ ಕಷ್ಟ